

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

SUPPORTED BY
GOVERNMENT OF INDIA
KAPPEC

ORGANISED BY
DEPARTMENT OF AGRICULTURE
FiBL



**ಶ್ರೀ ಡಿ. ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

# ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2025 ಸಾವಯವ ಮತ್ತು ಸಿರಿಧಾನ್ಯ

ಜನವರಿ 23 ರಿಂದ 25, ತ್ರಿಪುರವಾಸಿನಿ
ಅರಮನೆ ಮೈದಾನ, ಬೆಂಗಳೂರು

## ಸಾವಯವ ಮತ್ತು ಸಿರಿಧಾನ್ಯ : ಪರಂಪರೆಯ ಕೃಷಿ, ಭವಿಷ್ಯದ ಪೋಷಣೆ



ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳೊಂದಿಗೆ ಮಾನ್ಯ ಕೃಷಿ ಸಚಿವರಾದ ಶ್ರೀ. ಎನ್. ಚಲುವರಾಯಸ್ವಾಮಿಯವರು ಕಾರ್ಯಕ್ರಮದ ಉದ್ಘಾಟನೆ ಮಾಡುತ್ತಿರುವುದು.




ಕರ್ನಾಟಕದ ಪಶ್ಚಿಮ ಘಟ್ಟಗಳ ರೈತರ ಕ್ಷೇತ್ರದಲ್ಲಿ
ITF 2025 ರ ಟ್ಯಾಂಬೋ ಕಲೆ

# “ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಸಾವಯವ & ಸಿರಿಧಾನ್ಯ-2025”

**23-25, ಜನವರಿ 2025 ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು**

ಸಾವಯವ ಮತ್ತು ಸಿರಿಧಾನ್ಯಗಳ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಆರನೇ ಆವೃತ್ತಿಯನ್ನು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯಿಂದ ಆಯೋಜಿಸಲಾಗಿದೆ. ಈ ಮೇಳವು ರೈತರು, ರೈತ ಗುಂಪುಗಳು, ದೇಶೀಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳು, ಸಾವಯವ ಮತ್ತು ಸಿರಿಧಾನ್ಯ ವಲಯದ ಕೇಂದ್ರ ಮತ್ತು ರಾಜ್ಯ ಸಂಸ್ಥೆಗಳನ್ನು ಒಗ್ಗೂಡಿಸುವುದರ ಜೊತೆಗೆ ಹೊಸ ಅವಕಾಶಗಳನ್ನು ಅನ್ವೇಷಿಸುವ ಮತ್ತು ಪರಿಣಾಮಕಾರಿಯಾಗಿ ಮಾರುಕಟ್ಟೆ ಸಂಪರ್ಕಗಳನ್ನು (forward and backward linkages) ಕಲ್ಪಿಸುವ ವೇದಿಕೆಯಾಗಿದೆ.

ಕರ್ನಾಟಕ ಸರ್ಕಾರವು 2017 ರಲ್ಲಿ ಆಯೋಜಿಸಿದ ಮೊದಲ ಆವೃತ್ತಿಯ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳದ ಮೂಲಕ ರಾಜ್ಯವು ಸಾವಯವ ಮತ್ತು ಸಿರಿಧಾನ್ಯಗಳ ಪ್ರಚಾರದಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿರುತ್ತದೆ. ತದನಂತರ ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಆವೃತ್ತಿಗಳನ್ನು ಕ್ರಮವಾಗಿ 2018, 2019, 2023 ಮತ್ತು 2024 ರಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿರುತ್ತದೆ.

ಈ ಮೇಳಗಳು ಸಾವಯವ ಮತ್ತು ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸುವುದರ ಜೊತೆಗೆ ಈ ಕೆಳಗಿನ ಉದ್ದೇಶಗಳನ್ನು ಸಾಧಿಸುವಲ್ಲಿ ಗಮನಾರ್ಹ ಮೈಲುಗಲ್ಲುಗಳಾಗಿ ಪರಿಣಮಿಸಿವೆ:

- ರೈತರಿಗೆ ಒಳ್ಳೆಯದು - ಆಹಾರ, ಮೇವು, ಇಂಧನವಾಗಿ ಬಹು ಉಪಯೋಗ ಮತ್ತು ಬರಗಾಲದಲ್ಲಿ ರೈತರಿಗೆ ಉತ್ತಮ ಪರ್ಯಾಯ ನಿರ್ವಹಣಾ ತಂತ್ರ.
- ಗ್ರಾಹಕರಿಗೆ ಒಳ್ಳೆಯದು - ಪೌಷ್ಟಿಕಾಂಶ ಮತ್ತು ಆರೋಗ್ಯ ಸಮಸ್ಯೆಗಳ ನಿವಾರಣೆ (ಕಬ್ಬಿಣ, ಸತು, ಫೋಲಿಕ್ ಆಮ್ಲ, ಕ್ಯಾಲ್ಸಿಯಂ ಕೊರತೆ ನೀಗಿಸಲು ಮುತ್ತು ಮಧುಮೇಹ ನಿಯಂತ್ರಣ)
- ಪರಿಸರಕ್ಕೆ ಒಳ್ಳೆಯದು – ಕಡಿಮೆ ನೀರಿನ ಅವಶ್ಯಕತೆ ಹೊಂದಿರುತ್ತದೆ. ಅತ್ಯಂತ ಶುಷ್ಕ ವಾತಾವರಣದಲ್ಲಿ ಬದುಕಬಲ್ಲವು. ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುತ್ತವೆ.



## ಸಾವಯವದೆಡೆಗೆ ನಡೆ

- ಭಾರತವು ವಿಶ್ವದ ಸಾವಯವ ಕೃಷಿ ವಿಸ್ತೀರ್ಣದಲ್ಲಿ 2ನೇ ಸ್ಥಾನ ಹಾಗೂ ಒಟ್ಟು ಉತ್ಪಾದಕರಲ್ಲಿ ಮೊದಲನೇ ಸ್ಥಾನದಲ್ಲಿರುತ್ತದೆ. (ಮೂಲ: FIBL & IFOAM ಇಯರ್ ಬುಕ್, 2024).
- ಒಟ್ಟು 73.0 ಲಕ್ಷ ಹೆಕ್ಟೇರ್ ವಿಸ್ತೀರ್ಣವು ಸಾವಯವ ಪ್ರಮಾಣೀಕರಣ ಪ್ರಕ್ರಿಯೆಗೆ ನೋಂದಾಯಿತವಾಗಿರುತ್ತದೆ (2023-24). ಈ ಪೈಕಿ 44.75 ಲಕ್ಷ ಹೆಕ್ಟೇರ್ ಪ್ರದೇಶವು ಸಾಗುವಳಿ ಪ್ರದೇಶವಾಗಿದ್ದು, 28.50 ಲಕ್ಷ ಹೆಕ್ಟೇರ್ ವಿಸ್ತೀರ್ಣವು ಅರಣ್ಯ ಪ್ರದೇಶವಾಗಿರುತ್ತದೆ (ಮೂಲ: APEDA).
- 2023-24 ನೇ ಸಾಲಿನಲ್ಲಿ ಭಾರತವು ಸುಮಾರು 36.00 ಲಕ್ಷ ಟನ್ ಪ್ರಮಾಣೀಕೃತ ಸಾವಯವ ಉತ್ಪನ್ನಗಳನ್ನು ಉತ್ಪಾದಿಸಿರುತ್ತದೆ (ಮೂಲ: APEDA).
- 2023-24ರಲ್ಲಿ ಭಾರತದ ಒಟ್ಟು ರಫ್ತು ಪ್ರಮಾಣವು 2.61 ಲಕ್ಷ ಟನ್ ಆಗಿದ್ದು, ಈ ಪೈಕಿ ಸಾವಯವ ಆಹಾರ ರಫ್ತಿನಿಂದ ಸುಮಾರು ₹4007.91 ಕೋಟಿ (494.80 ದಶಲಕ್ಷ USD) ಆದಾಯವಾಗಿತ್ತು (ಮೂಲ: APEDA).

## ಸಿರಿಧಾನ್ಯಗಳನ್ನು ಬಳಸೋಣ

- ಭಾರತದ ಸಿರಿಧಾನ್ಯ ಉತ್ಪಾದನೆಯು ಸುಮಾರು 175.0 ಲಕ್ಷ ಟನ್‌ಗಳಾಗಿದ್ದು, ಇದು ವಿಶ್ವದ ಶೇ. 38.40 ರಷ್ಟಾಗಿರುತ್ತದೆ. (ಮೂಲ: APEDA).
- ಭಾರತದ ಸಿರಿಧಾನ್ಯ ಉತ್ಪಾದನೆಯಲ್ಲಿ ಕರ್ನಾಟಕ ಸೇರಿದಂತೆ ರಾಜಸ್ಥಾನ, ಉತ್ತರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯಗಳು 79.6% ಕ್ಕಿಂತಲೂ ಹೆಚ್ಚು ಪಾಲನ್ನು ಹೊಂದಿವೆ.
- ಸಿರಿಧಾನ್ಯಗಳು ಏಷ್ಯಾ ಮತ್ತು ಆಫ್ರಿಕಾದಲ್ಲಿ ಶತಕೋಟಿಗಿಂತಲೂ ಹೆಚ್ಚು ಜನರ ಸಾಂಪ್ರದಾಯಿಕ ಆಹಾರವಾಗಿದೆ (ಮೂಲ: APEDA).

## ಪಾರಂಪರಿಕ ಬೆಳೆ ಪರಂಪರೆಯನ್ನು ಸಂರಕ್ಷಿಸೋಣ

ತಲೆಮಾರುಗಳಿಂದ ರೈತರು ಆಯ್ಕೆಮಾಡಿ ಬೆಳೆದ ತಳಿಗಳನ್ನು ದೇಸಿತಳಿಗಳೆಂದು ಕರೆಯಲಾಗುತ್ತದೆ. ಸ್ಥಳೀಯ ಅಥವಾ ಸಾಂಪ್ರದಾಯಿಕ ಕೃಷಿ ಪದ್ಧತಿಗಳಿಂದ ಅಭಿವೃದ್ಧಿಪಡಿಸಿ ನಿರ್ವಹಿಸಲ್ಪಟ್ಟ ಈ ತಳಿಗಳನ್ನು ಸಾಂಪ್ರದಾಯಿಕ, ಪಾರಂಪರಿಕ, ಜಾನಪದ ಅಥವಾ ದೇಸಿ ಪ್ರಭೇದಗಳೆಂದು ವಿವಿಧ ರೀತಿಯಲ್ಲಿ ಕರೆಯಲ್ಪಡುತ್ತವೆ. ದೇಸಿ ತಳಿಗಳು ಹೊಂದಿರುವ ವಿಶಿಷ್ಟ ಗುಣಲಕ್ಷಣಗಳು ಮತ್ತು ಭೌಗೋಳಿಕ ಮೂಲಗಳ ಕಾರಣದಿಂದ ಕೆಲವೇ ರೈತರು ದೇಸಿ ತಳಿ ಕೃಷಿ ಮಾಡುವುದನ್ನು ಮುಂದುವರೆಸಿರುತ್ತಾರೆ. ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲಾದ ಅಧಿಸೂಚಿತ ಪ್ರಭೇದಗಳಿಗಿಂತ ದೇಸಿ ತಳಿಗಳು ಪೋಷಕಾಂಶಗಳಲ್ಲಿ ಸಮೃದ್ಧವಾಗಿವೆ.

ಕರ್ನಾಟಕ ಸರ್ಕಾರವು 2024ರ ಆಯವ್ಯಯ ಭಾಷಣದಲ್ಲಿ ಕಣ್ಮರೆಯಾಗುತ್ತಿರುವ ಹಾಗೂ ನಶಿಸಿ ಹೋಗುತ್ತಿರುವ ಸ್ಥಳೀಯ ಬೆಳೆಗಳ ತಳಿಗಳನ್ನು ಸಂರಕ್ಷಿಸಲು ಹೊಸ ಯೋಜನೆಯನ್ನು ಘೋಷಿಸಿದೆ. ಕರ್ನಾಟಕದಾದ್ಯಂತ ರೈತರ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸುವ ಮೂಲಕ ಸುಸ್ಥಿರ ಆಹಾರ ವ್ಯವಸ್ಥೆಗಾಗಿ ದೇಸಿ ತಳಿಗಳ ಸಂರಕ್ಷಣೆ ಮತ್ತು ಪ್ರಚಾರ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ಕಾರ್ಯಕ್ರಮದಡಿ ದೇಸಿ ತಳಿಗಳ ಕೃಷಿ ಮತ್ತು ಸಂರಕ್ಷಣೆ ಮಾಡುತ್ತಿರುವ ರೈತರನ್ನು ಗುರುತಿಸಿ ಉತ್ತೇಜಿಸಲು ಯೋಜಿಸಲಾಗಿದೆ. ಅಲ್ಲದೇ, ಪೌಷ್ಟಿಕಾಂಶ ಪ್ರಯೋಜನಗಳು, ಔಷಧೀಯ ಗುಣಗಳು ಮತ್ತು ಆಹಾರಗಳ ರುಚಿಯನ್ನು ಗ್ರಾಹಕರಲ್ಲಿ ಜನಪ್ರಿಯಗೊಳಿಸಲು ದೇಸಿ ತಳಿಗಳನ್ನು ಉತ್ತೇಜಿಸಲಾಗುತ್ತದೆ. ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಸಾವಯವ ಮತ್ತು ಸಿರಿಧಾನ್ಯ-2025 ರಲ್ಲಿ ಮೊದಲ ಬಾರಿ ದೇಸಿ ತಳಿಗಳ ಪ್ರತ್ಯೇಕ ಪೆವಿಲಿಯನ್ ಅನ್ನು ಸ್ಥಾಪಿಸಲಾಗುತ್ತಿದೆ.




## ಮಣ್ಣು – ಬೆಳೆ ಬೆಳೆಯಲು ಮೂಲ ಆಧಾರ

ಬೆಳೆಗಳಿಗೆ ಮಣ್ಣು ಪ್ರಮುಖ ಆಧಾರವಾಗಿರುವುದರಿಂದ, ರೈತರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಲ್ಲಿ ಮಣ್ಣಿನ ಮಹತ್ವ, ಗುಣಲಕ್ಷಣಗಳು, ವರ್ಗೀಕರಣ ಮತ್ತು ರಚನೆಯ ಕುರಿತು ಅರಿವು ಮೂಡಿಸುವುದು ಅತ್ಯವಶ್ಯವಾಗಿದೆ. ಈ ಉದ್ದೇಶದಿಂದ, ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಸಾವಯವ ಮತ್ತು ಸಿರಿಧಾನ್ಯ-2025 ರಲ್ಲಿ ಮಣ್ಣಿನ ಪೆಡಾನ್ ಪೆವಿಲಿಯನ್ ಅನ್ನು ಪರಿಚಯಿಸಲಾಗುತ್ತಿದೆ.

ಮಣ್ಣು ಪೆಡಾನ್ ಎಂಬುದು ನಿರ್ದಿಷ್ಟ ಮಣ್ಣಿನ ಪ್ರಕಾರದ ಮಣ್ಣಿನ ಎಲ್ಲಾ ಪದರಗಳನ್ನು ಒಳಗೊಂಡಿರುವ ಒಂದು ಚಿಕ್ಕ ಘಟಕವಾಗಿದೆ. ಇದು ಸಾಮಾನ್ಯವಾಗಿ 1 ಚದರ ಮೀಟರ್ ಮೇಲ್ಮೈ ವಿಸ್ತೀರ್ಣವನ್ನು ಹೊಂದಿದ್ದು ಮಣ್ಣಿನ ಮೂಲ ವಸ್ತುವಿನವರೆಗೆ ವಿಸ್ತರಿಸುತ್ತದೆ.

- ಮಣ್ಣಿನ ಪೆಡಾನ್ 3-D ಪರಿಕಲ್ಪನೆಯಾಗಿದ್ದು, ಮಣ್ಣಿನ ಎಲ್ಲಾ ಗುಣಲಕ್ಷಗಳನ್ನು ಹೊಂದಿರುತ್ತದೆ.
- ಮಣ್ಣನ್ನು ವರ್ಗೀಕರಿಸಲು ಹಾಗೂ ಮಣ್ಣು ಸಮೀಕ್ಷೆಯಲ್ಲಿ ಪೆಡಾನ್ ಅನ್ನು ಘಟಕವಾಗಿ ಬಳಸಲಾಗುತ್ತದೆ.
- ಬೆಳೆ ಉತ್ಪಾದನೆಗೆ ಮಣ್ಣಿನ ಪ್ರಕಾರವನ್ನು ಅರ್ಥೈಸಿಕೊಳ್ಳಲು, ಮಣ್ಣಿನ ಬಣ್ಣ ಮತ್ತು ವಿನ್ಯಾಸ ಪ್ರಮುಖ ಗುಣಲಕ್ಷಣಗಳಾಗಿದ್ದು, ರೈತರು ಇವುಗಳ ಆಧಾರದ ಮೇಲೆ ಮಣ್ಣನ್ನು ವರ್ಗೀಕರಿಸಲು ಪೆಡಾನ್ ಸಹಕಾರಿಯಾಗಿದೆ.

ಸದರಿ ಪೆವಿಲಿಯನ್ ನಲ್ಲಿ Black, Red, Laterite ಹಾಗೂ Alluvial ಮಣ್ಣಿನ ಪ್ರತ್ಯೇಕ Monolith ಗಳು (ಮಣ್ಣಿನ ರಚನೆ, ಬಣ್ಣ ಮತ್ತು ಪದರಗಳನ್ನು ಬಿಂಬಿಸುವ ಏಕಶಿಲೆಯ ಮಣ್ಣಿನ ಲಂಬ ವಿಭಾಗ (vertical section), ಜಿಲ್ಲಾವಾರು ಮಣ್ಣಿನ ವಿಧಗಳ ರಾಜ್ಯ ಡಿಜಿಟಲ್ ನಕ್ಷೆ ಹಾಗೂ ವಿವಿಧ ಶಿಲೆಗಳ ನೈಜ ಮಾದರಿಗಳನ್ನು ಪ್ರದರ್ಶಿಸಲಾಗುವುದು.




## ಸಾವಯವ ಮತ್ತು ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸುವಲ್ಲಿ ಕರ್ನಾಟಕದ ಹಾದಿ

- ಕರ್ನಾಟಕ ಸರ್ಕಾರವು ಸುಮಾರು 2 ದಶಕಗಳಿಂದ ಸಾವಯವ ಕೃಷಿಯನ್ನು ಉತ್ತಮ ಪರ್ಯಾಯ ಪದ್ಧತಿಯಾಗಿ ಉತ್ತೇಜಿಸಲು ಪ್ರಾರಂಭಿಸಿದೆ.
- ಸ್ವಾವಲಂಬನೆ, ಗ್ರಾಮೀಣಾಭಿವೃದ್ಧಿ ಮತ್ತು ಪ್ರಕೃತಿ ಸಂರಕ್ಷಣೆಗೆ ಒತ್ತು ನೀಡಲು 2004 ರಲ್ಲಿ ಪ್ರತ್ಯೇಕ ಸಾವಯವ ಕೃಷಿ ನೀತಿಯನ್ನು ಹೊರತರಲಾಗಿರುತ್ತದೆ.
- ಈ ನೀತಿಯಡಿಯಲ್ಲಿ ರಾಜ್ಯಾದ್ಯಂತ ವಿವಿಧ ಸಾವಯವ ಕೃಷಿ ಉತ್ತೇಜನಾ ಕಾರ್ಯಕ್ರಮಗಳಾದ ಸಾವಯವ ಗ್ರಾಮ, ಪ್ರಮಾಣೀಕರಣ, ಸಂಸ್ಕರಣೆ ಮುಂತಾದ  ಸಾವಯವ ಕೃಷಿ ಪ್ರಚಾರ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿರುತ್ತದೆ.
- ಸಿರಿಧಾನ್ಯಗಳಿಗೆ ಹೆಚ್ಚಿನ ಒತ್ತು ನೀಡಿ 2017ರಲ್ಲಿ ಪರಿಷ್ಕೃತ ಸಾವಯವ ನೀತಿಯನ್ನು ಹೊರತರಲಾಗಿದ್ದು, ಅಂದಿನಿಂದ, ರಾಜ್ಯ ಸರ್ಕಾರವು ಸಾಂಪ್ರದಾಯಿಕ ಮತ್ತು ಸಾವಯವ ಸಿರಿಧಾನ್ಯಗಳನ್ನು "ಪ್ರಜ್ಞಾವಂತ ಆಹಾರ" ವಾಗಿ ಉತ್ತೇಜಿಸಲಾಗುತ್ತಿದೆ.

ಪ್ರಸ್ತುತ, ದೇಶದ ಪ್ರಮಾಣೀಕೃತ ಸಾವಯವ ಕೃಷಿ ವಿಸ್ತೀರ್ಣದಲ್ಲಿ ಕರ್ನಾಟಕವು 10ನೇ ಸ್ಥಾನದಲ್ಲಿದ್ದು, ಒಟ್ಟು ವಾರ್ಷಿಕ ಸಾವಯವ ಪ್ರಮಾಣೀಕೃತ ಉತ್ಪಾದನೆಯಲ್ಲಿ 4ನೇ ಸ್ಥಾನದಲ್ಲಿರುತ್ತದೆ (APEDA CAQ ಅಂಶಗಳು).

**ಸಾವಯವ ಮತ್ತು ಸಿರಿಧಾನ್ಯಗಳನ್ನು ‘ಭವಿಷ್ಯದ ಪೀಳಿಗೆಯನ್ನು ಪೋಷಿಸುವ ಸಾಂಪ್ರದಾಯಿಕ ಪ್ರಜ್ಞಾವಂತ ಆಹಾರ‘ ಎಂದು ಜನಪ್ರಿಯಗೊಳಿಸುವುದು ಮತ್ತು ಭವಿಷ್ಯಕ್ಕಾಗಿ ಪಾರಂಪರಿಕ ದೇಸಿ ತಳಿಗಳನ್ನು ಬೆಳೆಸಿ ಸಂರಕ್ಷಿಸುವುದು ರಾಜ್ಯ ಸರ್ಕಾರದ ಧ್ಯೇಯೋದ್ದೇಶವಾಗಿದೆ.**

## ಕರ್ನಾಟಕದಲ್ಲಿ ಸಿರಿಧಾನ್ಯಗಳ ಒಟ್ಟು ಪ್ರದೇಶ = 18.37 ಲಕ್ಷ ಹೆಕ್ಟೇರ್.

- ಪ್ರಮುಖ ಸಿರಿಧಾನ್ಯಗಳು = 18.06 ಲಕ್ಷ ಹೆಕ್ಟೇರ್ (ರಾಗಿ – 8.27 ಲಕ್ಷ ಹೆಕ್ಟೇರ್, ಜೋಳ – 8.11 ಲಕ್ಷ ಹೆಕ್ಟೇರ್ ಮತ್ತು ಸಜ್ಜೆ - 1.68 ಲಕ್ಷ ಹೆಕ್ಟೇರ್).
- ಕಿರು/ಸಿರಿಧಾನ್ಯಗಳು - 0.31 ಲಕ್ಷ ಹೆಕ್ಟೇರ್ (ನವಣೆ, ಸಾಮೆ, ಕೊರಲೆ, ಹಾರಕ, ಬರಗು ಮತ್ತು ಊದಲು).

- ಸಿರಿಧಾನ್ಯಗಳ ಆರೋಗ್ಯ ಪ್ರಯೋಜನಗಳ ಬಗ್ಗೆ ರೈತರು, ಸಂಸ್ಕರಣೆದಾರರು, ಮಾರಾಟಗಾರರು ಮತ್ತು ಗ್ರಾಹಕರಲ್ಲಿ ಅರಿವು ಮೂಡಿಸುವ ಮೂಲಕ ರಾಜ್ಯದಲ್ಲಿ ಸಿರಿಧಾನ್ಯ ಪ್ರದೇಶವನ್ನು ವಿಸ್ತರಿಸಲು ಉತ್ತೇಜನ ನೀಡಲಾಗುತ್ತಿದೆ.
- ಸಿರಿಧಾನ್ಯಗಳಾದ ನವಣೆ, ಸಾಮೆ, ಕೊರಲೆ, ಹಾರಕ, ಬರಗು ಮತ್ತು ಊದಲು ಬೆಳೆಯುವ ರೈತರಿಗೆ ನೇರ ನಗದು ವರ್ಗಾವಣೆ (DBT) ಮೂಲಕ ಬೆಳೆ ಸಮೀಕ್ಷೆಯ ಆಧಾರದ ಮೇಲೆ ನೀಡಲಾಗುತ್ತಿದ್ದು, ಇದುವರೆಗೆ ₹104.39 ಕೋಟಿ ವೆಚ್ಚದಲ್ಲಿ ಒಟ್ಟು 1,33,330 ರೈತರು ಪ್ರಯೋಜನ ಪಡೆದಿರುತ್ತಾರೆ.
- ಸಿರಿಧಾನ್ಯಗಳನ್ನು ಬೆಳೆಯುವ ರೈತರಿಗೆ ನೇರ ನಗದು ವರ್ಗಾವಣೆ (DBT) ಮೂಲಕ, ಬೆಳೆ ಸಮೀಕ್ಷೆಯ ಆಧಾರದ ಮೇಲೆ ಪ್ರತಿ ಹೆಕ್ಟೇರ್‌ಗೆ ₹10,000/- ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.
- ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನಾಧರಿಸಿ ಸಿರಿಧಾನ್ಯ ಯಂತ್ರೋಪಕರಣಗಳ (ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್) ಒಟ್ಟು ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಠ ರೂ. 10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.
- ರಾಯಚೂರು ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪಿಸಲಾದ ಸಿರಿಧಾನ್ಯ ಉತ್ಕೃಷ್ಟತಾ ಕೇಂದ್ರವು ತರಬೇತಿ ಮತ್ತು ಇನ್‌ಕ್ಯೂಬೇಷನ್ ಸೌಲಭ್ಯಗಳ ಸೇವೆ ಒದಗಿಸುತ್ತಿದೆ.
- ರಾಜ್ಯದಲ್ಲಿ ಸಿರಿಧಾನ್ಯಗಳನ್ನು 'ಸಿರಿಧಾನ್ಯ' ಅಥವಾ "ಶ್ರೀಮಂತ ಧಾನ್ಯಗಳು" ಎಂದು ಗ್ರಹಿಸಿ, ಕರೆಯಲಾಗುತ್ತದೆ.
- ರಾಜ್ಯಾದ್ಯಂತ 15 ಪ್ರಾದೇಶಿಕ ಸಾವಯವ ಒಕ್ಕೂಟಗಳ ರಚನೆಗೆ ಉತ್ತೇಜಿಸಲಾಗಿದೆ.
- ಪ್ರಾದೇಶಿಕ ಒಕ್ಕೂಟಗಳಿಗೆ ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ, ಶ್ರೇಣೀಕರಣ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ನೆರವನ್ನು ನೀಡಲಾಗಿರುತ್ತದೆ.
- ರಾಜ್ಯದಲ್ಲಿ ಅತಿ ಹೆಚ್ಚು ಸಾವಯವ/ ಸಿರಿಧಾನ್ಯ ಪ್ರದರ್ಶನ/ ತಾಲ್ಲೂಕು/ ಜಿಲ್ಲೆ/ ರಾಜ್ಯ ಮಟ್ಟದಲ್ಲಿ ಮೇಳಗಳನ್ನು ಆಯೋಜಿಸಲಾಗುತ್ತಿದೆ.



## ಗ್ರಾಹಕರ ಜಾಗೃತಿ ಅಭಿಯಾನ /ಪ್ರಚಾರ ಕಾಯಕ್ರಮಗಳು

- ಆಹಾರ ತಜ್ಞರು, ಪೌಷ್ಟಿಕ ತಜ್ಞರು, ಫಿಟ್‌ನೆಸ್ & ಆಹಾರ ಬ್ಲಾಗರ್‌ಗಳಿಗೆ ಮತ್ತು ಕ್ಯಾಂಟೀನ್ ಕ್ಯಾಟರರ್‌ಗಳಿಗೆ ಕಾರ್ಯಾಗಾರಗಳು.
- ಸಿರಿಧಾನ್ಯ ವಾಕ್‌ಥಾನ್/ಓಟ, ಪ್ಯಾನಲ್ ಚರ್ಚೆಗಳು, ಪಾಕವಿಧಾನ ಪುಸ್ತಕಗಳು, ಪಾಕಸ್ಪರ್ಧೆಗಳು ಇತ್ಯಾದಿ.
- ಸಿರಿಧಾನ್ಯ ಪಾಲುದಾರರಿಗೆ ಸಿರಿಧಾನ್ಯ ಮೌಲ್ಯ ಸರಪಳಿ ತಂತ್ರಜ್ಞಾನಗಳ ಕುರಿತು ತರಬೇತಿ/ವೆಬಿನಾರ್‌ಗಳು
- ಪ್ರದರ್ಶನಗಳು ಮತ್ತು ಆಹಾರ ಮಳಿಗೆಗಳು.
- ರಾಜ್ಯ/ದೇಶದ ಪ್ರಮುಖ ನಗರಗಳಲ್ಲಿ ರೋಡ್ ಶೋ
- ಪ್ರಸಿದ್ಧ ವ್ಯಕ್ತಿಗಳ ಹೇಳಿಕೆ/ರೇಡಿಯೋ ಜಿಂಗಲ್ಸ್/ಹೋರ್ಡಿಂಗ್ಸ್/ಮಾಸ್ ಮೀಡಿಯಾ ಇತ್ಯಾದಿ
- ಬೆಂಗಳೂರು ಬ್ರಾಂಡಿಂಗ್: ಸ್ಕೈ ವಾಕರ್ಸ್, ಮಲ್ಟಿಪ್ಲೆಕ್ಸ್, ಶಾಪಿಂಗ್ ಮಾಲ್, ಮೆಟ್ರೋ ಹಾಗೂ ವಿಮಾನ ನಿಲ್ದಾಣಗಳಲ್ಲಿ ಬ್ರ್ಯಾಂಡಿಂಗ್.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿರಿಧಾನ್ಯ ಹಬ್ಬ, ಸಿರಿಧಾನ್ಯ ಓಟ ಹಾಗೂ ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳು ಪಾಕ ಸ್ಪರ್ಧೆ

ಕರ್ನಾಟಕವು ಭಾರತದ ಸಿರಿಧಾನ್ಯಗಳ ರಾಜಧಾನಿಯಾಗಿದೆ ಮತ್ತು ಕರ್ನಾಟಕ ಸರ್ಕಾರವು ಸಿರಿಧಾನ್ಯಗಳ ಪ್ರಚಾರದಲ್ಲಿ ಮುಂಚೂಣಿಯಲ್ಲಿದೆ. ಮೊದಲ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು 2017 ರಲ್ಲಿ, ಹಾಗೂ ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಆವೃತ್ತಿಗಳನ್ನು ಕ್ರಮವಾಗಿ 2018, 2019 , 2023 ಮತ್ತು 2024 ರಲ್ಲಿ ಬೆಂಗಳೂರಿನಲ್ಲಿ ನಡೆಸಲಾಯಿತು. ಪ್ರಸ್ತುತ, ಆರನೇ ಆವೃತ್ತಿಯನ್ನು ಜನವರಿ 23 ರಿಂದ 25, 2025 ರವರೆಗೆ ಹಮ್ಮಿಕೊಳ್ಳಲಾಗಿದೆ.

## ಮೇಳದ ಮುಖ್ಯಾಂಶಗಳು

- 300+ ಹವಾನಿಯಂತ್ರಿತ ಮಳಿಗೆಗಳು
- ಸಾವಯವ ಮತ್ತು ಸಿರಿಧಾನ್ಯಗಳ ಪ್ರತ್ಯೇಕ ಮಳಿಗೆಗಳು
- ಅಂತರರಾಷ್ಟ್ರೀಯ ಸಮ್ಮೇಳನ
- ದೇಸಿ ತಳಿಗಳ ಪೆವಿಲಿಯನ್
- ಮಣ್ಣಿನ ಪೆಡಾನ್ ಪೆವಿಲಿಯನ್
- ಉತ್ಪಾದಕರು ಮತ್ತು ಗ್ರಾಹಕರ ಸಭೆ(ಬಿ2ಸಿ)
- ಉತ್ಪಾದಕರು ಮತ್ತು ಮಾರುಕಟ್ಟೆದಾರರ ಸಭೆ(ಬಿ2ಬಿ)
- ಅಂತರರಾಷ್ಟ್ರೀಯ ಸಮ್ಮೇಳನ
- ರೈತರ ಕಾರ್ಯಾಗಾರ
- ಸಾವಯವ, ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ ಆಹಾರ ಮಳಿಗೆಗಳು
- ಸಾಂಸ್ಕೃತಿಕ ಕಾರ್ಯಕ್ರಮಗಳು



## ನಿರೀಕ್ಷಿತ ಸಂದರ್ಶಕರು

ಸಾವಯವ ಮತ್ತು ನೈಸರ್ಗಿಕ ಉತ್ಪಾದಕರು
ಸಗಟು ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು, ಸ್ವ ಸಹಾಯ ಗುಂಪುಗಳು
ರಫ್ತುದಾರರು ಮತ್ತು ಆಮದುದಾರರು
ಉಪಹಾರ ಗೃಹಗಳು ಮತ್ತು ಆಹಾರ ಪೂರೈಕೆದಾರರು
ಶಿಕ್ಷಣ ತಜ್ಞರು, ಸಂಶೋಧಕರು, ಪರಿಣಿತರು
ಆಹಾರ ಉತ್ಪಾದಕರು ಮತ್ತು ಸಂಸ್ಕರಣಾದಾರರು
ಸೇವಾ ಸಂಸ್ಥೆಗಳು
ವಿದ್ಯಾರ್ಥಿಗಳು
ಪೌಷ್ಠಿಕ ತಜ್ಞರು
ಗ್ರಾಹಕರು





## ಪ್ರದರ್ಶಿಸಲಾಗುವ ಉತ್ಪನ್ನಗಳು

- ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಉತ್ಪನ್ನಗಳು
  - ಮಸಾಲೆ ಪದಾರ್ಥಗಳು ಮತ್ತು ಗಿಡಮೂಲಿಕೆಗಳು
  - ತಾಜಾ ಹಣ್ಣುಗಳು ಮತ್ತು ತರಕಾರಿಗಳು
  - ಎಣ್ಣೆ ಬೀಜಗಳು, ಡ್ರೈಫ್ರೂಟ್ಸ್ ಮತ್ತು ತೆಂಗಿನಕಾಯಿ
  - ಸಾವಯವ ಧಾನ್ಯಗಳು ಮತ್ತು ಬೇಳೆಕಾಳುಗಳು
- ಪ್ರಮಾಣೀಕೃತ ಅರಣ್ಯ ಉತ್ಪನ್ನಗಳು
- ಸಾವಯವ ಜಾನುವಾರು ಉತ್ಪನ್ನಗಳು-ಹೈನುಗಾರಿಕೆ, ಕೋಳಿ ಸಾಗಾಣಿಕೆ ಮತ್ತು ಜೇನು
- ಸಾವಯವ ಜವಳಿ, ಸೌಂದರ್ಯವರ್ಧಕಗಳು, ವೈಯಕ್ತಿಕ ಆರೈಕೆ ವಸ್ತುಗಳು
- ಸಿರಿಧಾನ್ಯ ಸಂಸ್ಕರಣಾ ಯಂತ್ರೋಪಕರಣಗಳು
- ಪರಿಸರ ಸ್ನೇಹಿ ಉತ್ಪನ್ನಗಳು
- ರಾಜ್ಯದ ದೇಸಿತಳಿಗಳು

## ಹಿಂದಿನ ಮೇಳದ ಮುಖ್ಯಾಂಶಗಳು – ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2024

310 ಮಳಿಗೆಗಳು
05 ಅಂತರರಾಷ್ಟ್ರೀಯ ಪ್ರತಿನಿಧಿಗಳು
170 ಮಾರುಕಟ್ಟೆದಾರರು ಮತ್ತು 275 ಉತ್ಪಾದಕರು
20 ಆಹಾರ ಮಳಿಗೆಗಳು- ಸಿರಿಧಾನ್ಯ ಮತ್ತು ಸಾವಯವ ಆಹಾರ ಉತ್ಪನ್ನಗಳ ಪ್ರದರ್ಶನ
100 ಮಳಿಗೆಗಳೊಂದಿಗೆ ವಿಶೇಷ ಕರ್ನಾಟಕ ಪೆವಿಲಿಯನ್
213 ಬಿ2ಬಿ ಸಭೆಗಳು ಮತ್ತು 41 ಒಪ್ಪಂದಗಳು
₹1.46 ಬಿಲಿಯನ್ ಮೌಲ್ಯದ ವ್ಯವಹಾರ
2,00,000 ಕ್ಕೂ ಹೆಚ್ಚಿನ ಸಂದರ್ಶಕರು



## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ


**ಸಾವಯವ ಕೃಷಿ ಘಟಕ, ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001**

**ಫೋ: 080-22074111 / 22242746**

**ಮಿಂಚಂಚೆ: itf2025organiccell@gmail.com**


ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2025 ಸಾವಯವ ಮತ್ತು ಸಿರಿಧಾನ್ಯ

ಜನವರಿ 23 ರಿಂದ 25, ತ್ರಿಪುರವಾಸಿನಿ ಅರಮನೆ ಮೈದಾನ, ಬೆಂಗಳೂರು

**ವಿವರಗಳಿಗಾಗಿ ಸಂಪರ್ಕಿಸಿ: www.organics-millets.in**

